/

54

ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಟ./ನಾಕಹೊ/04/2016-17.. ದಿನಾಂಕ:13-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ತಿಪ್ಪೇರುದ್ರಪ್ಪ ತಂದೆ ಚಿಕ್ಕಪ್ಪ<br>2)ಗಡ್ಡೇರ ಗಂಗಮ್ಮ ಗಂಡ ಲೇಟ್ ಗಡ್ಡಿ ತಿಪ್ಪೇಸ್ವಾಮಿ<br>3)ತಿಪ್ಪಮ್ಮ ಗಂಡ ಲೇಟ್ ಅಜ್ಜಯ್ಯ<br>ನಿಂಬಳಗೇರಿ ಗ್ರಾಮ<br>ಕೂಡ್ಲಿಗಿ ತಾಲೂಕು | ಗಡ್ಡೇರು ತಿಪ್ಪೇಸ್ವಾಮಿ ತಂದೆ ಗಡ್ಡೇರು ಶರಣಪ್ಪ<br>ಸಿದ್ದಾಪುರ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಮಂಗಾಪುರ ಗ್ರಾಮದ ಸನಂ 377/1. 377/3. ವಿಸ್ತೀರ್ಣ 2-10. 10-67. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಮಂಗಾಪುರ ಗ್ರಾಮದ ಸನಂ 377/1. 377/3. ವಿಸ್ತೀರ್ಣ 2-10. 10-67. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ನಿಂಬಳಗೇರಿ ಗ್ರಾಮದ ತಿಪ್ಪೇರುದ್ರಪ್ಪ ತಂದೆ ಚಿಕ್ಕಪ್ಪ. ಮತ್ತು ಗಡ್ಡೇರ ಗಂಗಮ್ಮ ಗಂಡ ಲೇಟ್ ಗಡ್ಡಿ ತಿಪ್ಪೇಸ್ವಾಮಿ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಮಂಗಾಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 11-12-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಸಿದ್ದಾಪುರ ಗ್ರಾಮದ ಗಡ್ಡೇರು ತಿಪ್ಪೇಸ್ವಾಮಿ ತಂದೆ ಶರಣಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 06/2015-16. ದಿನಾಂಕ 12-01-2016 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 16-05-2016 ರಿಂದ 13-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಮಂಗಾಪುರ ಗ್ರಾಮದ ಸನಂ 377/1. 377/3. ವಿಸ್ತೀರ್ಣ 2-10. 10-67. ಎಕ್ರೆ ಜಮೀನುಗಳು ನಮ್ಮ ಅಜ್ಜನವರಾದ ಚನ್ನಬಸಪ್ಪ ತಂದೆ ಚನ್ನಬಸಪ್ಪ. ಮತ್ತು ನಮ್ಮ ಅಜ್ಜನ ತಮ್ಮನ ಮಕ್ಕಳಾದ ಗಡ್ಡಿ ತಿಪ್ಪೇಸ್ವಾಮಿ ತಂದೆ ಬಸಣ್ಣ ಮತ್ತು ತಿಪ್ಪಯ್ಯ ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇರುತ್ತದೆ. ಸದರಿ ನಮ್ಮ ಅಜ್ಜ ಚನ್ನಬಸಪ್ಪ ತಂದೆ ಚನ್ನಬಸಪ್ಪ. ಇವರು ದಿನಾಂಕ 16-04-1965 ರಂದು ಹಾಗೂ ಚಿಕ್ಕಪ್ಪ ತಂದೆ ಚನ್ನಬಸಪ್ಪ ಇವರು ದಿನಾಂಕ 20-06-1976 ರಂದು ಸಣ್ಣ ತಿಪ್ಪೇಸ್ವಾಮಿ ತಂದೆ ಬಸಣ್ಣ ಇವರು ದಿನಾಂಕ 10-06-1982 ರಂದು ಮತ್ತು ತಿಪ್ಪಯ್ಯ ತಂದೆ ಬಸಣ್ಣ ಇವರು ನಿಧನ ಹೊಂದಿದ್ದು ಇವರಿಗೆ ಸಂತಾನ ಇರುವುದಿಲ್ಲ ಕಾರಣ

ಸದರಿಯವರುಗಳ ಹೆಸರುಗಳನ್ನು ಕಡಿಮೆ ಮಾಡಿ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಉಭಯರು ರಾಜಿಯಾಗಿ ತಕರಾರು ಅರ್ಜಿಯನ್ನು ವಾಪಸ್ಸು ಪಡೆದಿರುತ್ತೇನೆಂದು ಪೋತಿವಾರಸು ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಯಾವ ಆಕ್ಷೇಪಣೆಗಳು ಇಲ್ಲವೆಂದು ಹೇಳಿಕೆಯನ್ನು ನೀಡಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಈ ಕೆಳಗಿನಂತೆ ಈ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಮಂಗಾಪುರ ಗ್ರಾಮದ ಸನಂ 377/1. 377/3. ವಿಸ್ತೀರ್ಣ 2-10. 10-67. ಎಕ್ರೆ ಜಮೀನುಗಳು ಜಂಟಿಪಟ್ಟದಾರರ ಹೆಸರುಗಳನ್ನು ಕಡಿಮೆ ಮಾಡಿ ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ತಿಪ್ಪೇರುದ್ರಪ್ಪ ತಂದೆ ಲೇಟ್ ಚಿಕ್ಕಪ್ಪ. ಗಡ್ಡೇರ ಗಂಗಮ್ಮ ಗಂಡ ಲೇಟ್ ಗಡ್ಡಿ ತಿಪ್ಪೇಸ್ವಾಮಿ. ತಿಪ್ಪಮ್ಮ ಗಂಡ ಲೇಟ್ ಅಜ್ಜಯ್ಯ ನಿಂಬಳಗೇರಿ ಗ್ರಾಮ ಇವರುಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 13-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ತಿಪ್ಪೇರುದ್ರಪ್ಪ ತಂದೆ ಲೇಟ್ ಚಿಕ್ಕಪ್ಪ. ಗಡ್ಡೇರ ಗಂಗಮ್ಮ ಗಂಡ ಲೇಟ್ ಗಡ್ಡಿ ತಿಪ್ಪೇಸ್ವಾಮಿ. ತಿಪ್ಪಮ್ಮ ಗಂಡ ಲೇಟ್ ಅಜ್ಜಯ್ಯ. ನಿಂಬಳಗೇರಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಗಡ್ಡೇರು ತಿಪ್ಪೇಸ್ವಾಮಿ ತಂದೆ ಗಡ್ಡೇರು ಶರಣಪ್ಪ ಸಿದ್ದಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

ರವಾನಿಸಲಾಗಿದೆ

ಕ್ರ.ಸಂ. ---- 8/7/16

ದಿನಾಂಕ ----